# ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಪಾಂಡವಪುರ

## ಸಿಸಿ.ನಂ. 175/2025

| | | | |
|---|---|---|---|
| ಸಾಕ್ಷಿದಾರರು | : | ರಮೇಶ | ಸಿ.ಡಬ್ಲ್ಯೂ : 1 |
| ತಂದೆ ಹೆಸರು | : | ಗೋವಿಂದೇಗೌಡ | ಪಿ.ಡಬ್ಲ್ಯೂ : 1 |
| ವಯಸ್ಸು | : | 46 ವರ್ಷ | |
| ವೃತ್ತಿ | : | ವ್ಯವಸಾಯ | |
| ವಾಸ ಸ್ಥಳ | : | ಬನ್ನಂಗಾಡಿ ಗ್ರಾಮ | |

**ಸಾಕ್ಷಿಯನ್ನು ದಿಃ 16.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ಚಾಸಾ.2 ಮತ್ತು 3 ನನ್ನ ದೊಡ್ಡಪ್ಪನ ಮಕ್ಕಳು. ಚಾಸಾ.4 ನನ್ನ ಹೆಂಡತಿ. ಆರೋಪಿಗಳು ನಮ್ಮ ಪಕ್ಕದ ಜಮೀನಿನವರು. ದಿಃ 11.12.2024 ರಂದು ವ್ಯವಸಾಯ ಮಾಡಿಕೊಂಡು ನಮ್ಮ ಜಮೀನಿನ ಬಳಿ ಕೆಲಸ ಮಾಡುತ್ತಿರುವಾಗ ಮದ್ಯಾಹ್ನ 12 ಗಂಟೆ ಸಮಯದಲ್ಲಿ ಅರಣ್ಯ ಇಲಾಖೆಯವರು ಬಂದು ನಮ್ಮ ದೊಡ್ಡಪ್ಪನವರ ಜಮೀನನ್ನು ಪರೀಕ್ಷಿಸುತ್ತಿದ್ದರು. ನಾನು ಹತ್ತಿರ ಹೋಗಿ ಏನು ಸಾರ್ ಪರೀಕ್ಷೆ ಮಾಡುತ್ತಿದ್ದೀರಾ ಎಂದು ಕೇಳಿದಾಗ ಗೋಮಾಳದಲ್ಲಿ ಮರ ಕಡಿದಿರುವುದಾಗಿ ಮನೋಹರ್ ಎಂಬುವವರು ದೂರು ನೀಡಿರುವುದಾಗಿ ಅದರ ತನಿಖೆಗಾಗಿ ಬಂದಿರುವುದಾಗಿ ತಿಳಿಸಿದರು, ಮನೋಹರ್ ರವರ ಮಗ ಮೋಹನ್ ಬಂದರು. ನಾನು ಮೋಹನನಿಗೆ ನಿಮ್ಮ ಅಪ್ಪನಿಗೆ ಬುದ್ದಿ ಹೇಳಲು

ಆಗುವುದಿಲ್ಲ ಸಣ್ಣಪುಟ್ಟ ವಿಚಾರಕ್ಕೆ ದೂರು ಕೊಡುತ್ತಾರೆಂದು ಹೇಳಿದೆನು. ಮೋಹನ್ ರವರು ಶೃತಿಯನ್ನು ಕರೆದುಕೊಂಡು ಬಂದರು. 1 ನೇ ಆರೋಪಿ ಶೃತಿಯನ್ನು ಏಕೆ ತೊಂದರೆ ಕೊಡುತ್ತೀರಾ, ಎಂದು ಕೇಳಿದಾಗ 1 ನೇ ಆರೋಪಿ ಕತ್ತಿನ ಪಟ್ಟಿ ಹಿಡಿದುಕೊಂಡು ನಿಮ್ಮಪ್ಪನದರಲ್ಲಿ ಮಾಡುತ್ತಿಲ್ಲ ಎಂದು ನನ್ನ ಶರ್ಟ್‌ನ ಗುಂಡಿ ಕಿತ್ತು ಹಾಕಿದರು. ಅಲ್ಲೆ ಇದ್ದ ಚಾಸಾ.6, 8 ಮತ್ತು 9 ರವರು ಜಗಳ ಬಿಡಿಸಿದರು.

2. ನಂತರ ನಾನು ಊರಿನ ಕಡೆಗೆ ಬಂದೆನು. ಸುಮಾರು ಒಂದು ಗಂಟೆ ಸಮಯದಲ್ಲಿ 1 ನೇ ಆರೋಪಿ ಗಂಡ ದೇವರಾಜು ಸಿಕ್ಕರು. ಏನೋ ಮಾತನಾಡಬೇಕು ನಿಂತಿಕೊಳ್ಳಿ ಎಂದು ದೇವರಾಜುರನ್ನು ಕೇಳಿದೆನು. ದೇವರಾಜುರವರು ಹೊಲದ ಹತ್ತಿರ ಬಂದು ಮಾತನಾಡಿ ಎಂದು ಹೊರಟು ಹೋದರು. ನಾನು ಗ್ರಾಮದ ಯಜಮಾನರು ಚಾಸಾ.5 ರವರ ಬಳಿ ನಡೆದ ಗಲಾಟೆ ಬಗ್ಗೆ ಒಪ್ಪಿಸುತ್ತಿರುತ್ತಿದ್ದಾಗ 3 ನೇ ಆರೋಪಿ ನನಗೆ ಕರೆ ಮಾಡಿ ಏನೋ ಮಾತನಾಡಬೇಕು ಹೊಲದ ಬಳಿ ಬನ್ನಿ ಎಂದು ಕರೆದರು. ನಾನು, ಚಾಸಾ.3, ಚಾಸಾ.2 ಹೊಲದ ಬಳಿ ಹೋದೆವು. ಆರೋಪಿಗಳ ಜೊತೆ ಇನ್ನು ನಾಲ್ಕು ಜನ ಹುಡುಗರು ಇದ್ದರು. ಆ ನಾಲ್ಕು ಜನರ ಹೆಸರು ನನಗೆ ಗೊತ್ತಿಲ್ಲ. ಪ್ಲಾಸ್ಟಿಕ್ ಪೈಪು ಮತ್ತು ದೊಣ್ಣೆಯಿಂದ ಚಾಸಾ.3 ರವರಿಗೆ ಹೊಡೆದರು. ಕೆಳಕ್ಕೆ ಕೆಡವಿಕೊಂಡು ತುಳಿದರು. ಬಿಡಿಸಲು ಹೋದ ನನಗೆ ದೊಣ್ಣೆಯಿಂದ ಎಡಭಾಗದ ಮಧ್ಯದ ಬೆರಳಿಗೆ ಹೊಡೆದರು. ಯಾರು ಹೊಡೆದರು

ಎಂದು ಗೊತ್ತಾಗಲಿಲ್ಲ. ಅಷ್ಟರಲ್ಲಿ ನನ್ನ ಹೆಂಡತಿ ಚಾಸಾ.4 ರವರು ಬಂದು ಬಿಡಿಸಲು ಬಂದಾಗ ಚಾಸಾ.3 ರವರು ನನ್ನ ಹೆಂಡತಿಯ ಕೈಗೆ ದೊಣ್ಣೆಯಿಂದ ಹೊಡೆದರು. ಅಷ್ಟರಲ್ಲಿ ಅಕ್ಕಪಕ್ಕದ ಜಮೀನಿನವರು ಬಂದರು. ಈ ಜಮೀನೇ ಬೇಡ ಮಜ್ಜಿಗೆಪುರಕ್ಕೆ ಬನ್ನಿ ನೊಡಿಕೊಳ್ಳುತ್ತೇನೆಂದು 3 ನೇ ಆರೋಪಿ ನನಗೆ ಎಚ್ಚರಿಗೆ ನೀಡಿ ನನ್ನನ್ನು ಕಳುಹಿಸಿದರು. ನಾನು, ಚಾಸಾ.3, 4 ಆಸ್ಪತ್ರೆಗೆ ಹೋಗಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದುಕೊಂಡೆವು. ಈ ಗಲಾಟೆ ಬಗ್ಗೆ ದೂರು ನೀಡಿದ್ದು ಸದರಿ ದೂರನ್ನು ನಿಪಿ.01 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು, ದಿಃ 14.12.2024 ರಂದು ಪೊಲೀಸರು ಮಹಜರು ಬರೆಯಲು ಬಂದಿದ್ದರು. ನಾನೇ ಪೊ ಲೀಸರಿಗೆ ಕೃತ್ಯ ಸ್ಥಳವನ್ನು ತೋರಿಸಿದೆನು. ಚಾಸಾ.10 ಮತ್ತು 11 ರವರು ಪಂಚರಾಗಿದ್ದರು. ಕೃತ್ಯ ಸ್ಥಳದಿಂದ ಪೊಲೀಸರು ದೊಣ್ಣೆಗಳನ್ನು ವಶ ಪಡಿಸಿಕೊಂಡರು. ಸದರಿ ಮಹಜರನ್ನು ಈಗ ನೋಡುತ್ತಿದ್ದು ನಿಪಿ.2 ಎಂದು, ಸಾಕ್ಷಿಯ ಸಹಿ ನಿಪಿ.2 ಎ ಎಂದು ಗುರುತಿಸಲಾಯಿತು. ಆ ಮಹಜರನ್ನು ಮದ್ಯಾಹ್ನ 12.15 ರಿಂದ 1 ಗಂಟೆವರೆಗೆ ಮಾಡಿದರು, ನಂತರ ಹೊಡೆದಿದ್ದ ಜಾಗಕ್ಕೆ ಪೊಲೀಸರು ಬಂದಿದ್ದು ಅಲ್ಲಿ ಮಹಜರು ಮಾಡಿದರು. ಆ ಮಹಜಹರನ್ನು ಮಾಡುವಾಗ ಚಾಸಾ.10 ಮತ್ತು 11 ಇದ್ದು ನಾನೇ ಕೃತ್ಯ ಸ್ಥಳ ತೋರಿಸಿದ್ದು ಆ ಸಮಯದಲ್ಲಿ ಪೈಪು ಮತ್ತು ಮೂರು ದೊಣ್ಣೆಗಳನ್ನು ವಶ ಪಡಿಸಿಕೊಂಡರು. ಸದರಿ ಮಹಜರನ್ನು ಈಗ ನೋಡುತ್ತಿದ್ದು ನಿಪಿ.3 ಎಂದು, ಸಾಕ್ಷಿಯ

ಸಹಿ ನಿಪಿ.3 ಎ ಎಂದು ಗುರುತಿಸಲಾಯಿತು. ಆಗ ಚಾಸಾ.8 ಮತ್ತು 11 ರವರು ಇದ್ದರು. ಆ ಸಮಯದಲ್ಲಿ ಫೋಟೋ ತೆಗೆದಿದ್ದು ಆ ಎರಡು ಫೋಟೋಗಳನ್ನು ನಿಪಿ.4 ಎಂದು ಗುರುತಿಸಲಾಯಿತು. ದೊಣ್ಣೆಯನ್ನು ವಶ ಪಡಿಸಿಕೊಳ್ಳುವಾಗ ತೆಗೆದ ಫೋಟೋವನ್ನು ನಿಪಿ.5 ಎಂದು ಗುರುತಿಸಲಾಯಿತು. ನಂತರ ಆರೋಪಿಗಳ ವಿರುದ್ಧ ಮರು ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದಿರುವ 3 ದೊಣ್ಣೆ ಮತ್ತು ಒಂದು ಪ್ಲಾಸ್ಟಿಕ್ ಪೈಪು ಮತ್ತು ಒಂದು ಶರಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮೂರು ದೊಣ್ಣೆಗಳನ್ನು ಮುಮಾ.1 ಎಂದು, ಒಂದು ಪ್ಲಾಸ್ಟಿಕ್ ಪೈಪನ್ನು ಮುಮಾ.2 ಎಂದು, ಒಂದು ಶಟರನ್ನು ಮುಮಾ. 3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ**

4. ಆರೋಪಿಗಳಿಗೂ ನಿಮಗೂ ಜಮೀನಿನ ವಿಚಾರವಾಗಿ ಹಳೇ ದ್ವೇಷ ಇದೆ ಎಂದರೆ ಸರಿಯಲ್ಲ. ಅರಣ್ಯ ಇಲಾಖೆಯವರು ಸುಮಾರು10.30 ರಿಂದ 11 ಗಂಟೆಗೆ ಜಮೀನಿನ ಬಳಿ ಬಂದಿದ್ದರು. ಗಲಾಟೆಯಾದ ಜಮೀನಿನಲ್ಲಿ ಸವತೆ ಗಿಡ ಹಾಕಿದ್ದೆವು. ಘಟನೆ ನಡೆಯಿತು ಎನ್ನಲಾದ ಸಮಯದಲ್ಲಿ ನಾನು, ಅರಣ್ಯ ಇಲಾಖೆಯವರು ಮತ್ತು ಬೇರೆ ಮೂರು ಜನ ಅಕ್ಕಪಕ್ಕದ ಹೊಲದವರು ಇದ್ದರು ಹಾಗೂ ನಮ್ಮ ಕೆಲಸಗಾರರು ಜಮೀನಿನ ಒಳಗಡೆ ಕೆಲಸ ಮಾಡುತ್ತಿದ್ದರು. 2 ನೇ ಆರೋಪಿ ಸ್ಥಳಕ್ಕೆ ಬಂದಿರಲಿಲ್ಲ ಹಾಗೂ ಮಂಡ್ಯದಲ್ಲಿ

ಡಿಗ್ರಿ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಅವರು ಕಾಲೇಜಿಗೆ ಹೋಗುತ್ತಿಲ್ಲ ವ್ಯವಸಾಯ ಮಾಡುತ್ತಿದ್ದುರು ಎಂದು ಹೇಳುತ್ತಾರೆ ಹಾಗೂ ಗಲಾಟೆಗೆ ಮುನ್ನ ಅವರು ಉಪನ್ಯಾಸಕರಾಗಿದ್ದರು ಎಂದು ಹೇಳುತ್ತಾರೆ. 2 ನೇ ಆರೋಪಿ ಸ್ಥಳದಲ್ಲಿ ಇಲ್ಲದೆ ಇದ್ದರೂ ಸಹ ಇದ್ದರು ಎಂದು ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ. 1 ಮತ್ತು 3 ನೇ ಆರೋಪಿಗಳು ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನೀವು ದೂರು ಕೊಡುವಾಗ 3 ನೇ ಆರೋಪಿ ಹೇಳದೆ ಮರು ಹೇಳಿಕೆಯಲ್ಲಿ ಉದ್ದೇಶಪೂರ್ವಕವಾಗಿ ಹೇಳಿರುತ್ತೀರಾ ಎಂದರೆ ಸರಿಯಲ್ಲ. ನೀವು ಗೋಮಾಳದಲ್ಲಿ ಮರಗಳನ್ನು ಅಕ್ರಮವಾಗಿ ಕಡಿದು ಸಾಗಾಣಿಕೆ ಮಾಡುತ್ತಿರುತ್ತಿರಾ ಎಂದರೆ ಸರಿಯಲ್ಲ, ಆ ವಿಚಾರದ ಬಗ್ಗೆ 1 ಮತ್ತು 2 ನೇ ಆರೋಪಿಗಳ ತಂದೆ ನಿಮ್ಮ ವಿರುದ್ಧ ದುಜಾರು ನೀಡಿದ್ದರು ಎಂದು ಈ ಸುಳ್ಳು ದೂರನ್ನು ಆರೋಪಿಗಳ ವಿರುದ್ಧ ಸೃಷ್ಟಿಸಿ ನೀಡಿರುತ್ತೀರಾ ಎಂದರೆ ಸರಿಯಲ್ಲ ನಮ್ಮ ದೊಡ್ಡಪ್ಪನ ಜಮೀನಿನಲ್ಲಿ ಸವತೇಕಾಯಿ ಬೆಳೆದಿದ್ದೆವು. ಅರಣ್ಯದ ಜಮೀನಿನಲ್ಲಿ ಸವತೇಕಾಯಿ ಬಳ್ಳಿ ಹಬ್ಬಿಸಲು ದಡಿಗಳನ್ನು ಕಡಿದಿರುತ್ತೀರಾ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ದಡಿಗಳನ್ನು ಕಿರಂಗೂರಿನಿಂದ ತಂದಿದ್ದೆವು ಎಂದು ಹೇಳುತ್ತಾರೆ. 1 ಮತ್ತು 2 ನೇ ಆರೋಪಿಗಳು ಸುಮಾರು 11 ಗಂದಟೆ ಸಮಯದಲ್ಲಿ ಗಲಾಟೆ ಮಾಡಿದರು. 3 ನೇ ಆರೋಪಿಗಳು ಮತ್ತು ಅವರ ಸಂಗಡಿಗರು 1 ಗಂಟೆ ನಂತರ ಗಲಾಟೆ ಮಾಡಿದರು. ಆರೋಪಿಗಳನ್ನು ಈ ಪ್ರಕರಣದಲ್ಲಿ ಸಿಕ್ಕಿ ಹಾಕಿಸಲು ಸಮಯ

ಹೊಂದಾಣಿಕೆ ಮಾಡಿಕೊಂಡು ಹೇಳುತ್ತಿರುತ್ತೀರಾ ಎಂದರೆ ಸರಿಯಲ್ಲ. ಚಾಸಾ.5 ರವರಿಗೆ ದೂರು ಕೊಡುತ್ತಿದ್ದೆನು. ಆಗ ಸಮಯ 1 ಗಂಟೆಯಾಗಿತ್ತು. ಚಾಸಾ.5 ರವರು ನಿಮಗೆ ಎನು ಹೇಳಿದರು ಎಂದರೆ ಸಾಕ್ಷಿ ಚಾಸಾ.5 ರವರ ಬಳಿ ನಾನು ಮಾತನಾಡುತ್ತಿದ್ದಾಗ 3 ನೇ ಆರೋಪಿ ಜಮೀನಿನ ಬಳಿ ಬರಬೇಕೆಂದು ಕರೆ ಮಾಡಿದರು ಆದ್ದರಿಂದ ಚಾಸಾ.5 ರವರು ಎನು ಕೇಳಿಕೊಂಡು ಬನ್ನಿ ಎಂದು ಕಳುಹಿಸಿದರು ಎಂದು ಹೇಳುತ್ತಾರೆ.

4. ಆರೋಪಿಗಳು ಮುಮಾ.1 ಮತ್ತು 2 ರಿಂದ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಮುಮಾ.1 ರೈತರ ಜಮೀನುಗಳಲ್ಲಿ ಸಿಗುತ್ತವೆ ಎಂದರೆ ಸರಿ. ಪೊಲೀಸರು ಮೂರು ಫೋಟೋಗಳನ್ನು ತೆಗೆದರು. ಮಹಜರು ಮಾಡುವಾಗ ಒಂದು ಫೋಟೋ ತೆಗೆದರು. ದಿಃ 11.12.2024 ರಂದು ಗಲಾಟೆಯಾದಾಗ ಶರಟು ಹರಿದು ಹೋಯಿತು, ಅದನ್ನು ಅಲ್ಲೆ ಬಿಚ್ಚಿಟ್ಟು ಬೇರೆ ಶರಟು ಹಾಕಿಕೊಂಡೆನು. ಮೂರು ದಿಲನ ಬಿಟ್ಟು ಪೊಲೀಸರು ಮು ಹಜರು ಮಾಡಲು ಬಂದರು. ಆಗ ಬಿಚ್ಚಿಟ್ಟಿದ ಶರಟನ್ನು ಪೊಲೀಸರಿಗೆ ಕೊಟ್ಟೆನು. ನೀವು ಶರಟನ್ನು ಧರಿಸಿರುವ ಫೋಟೋದಲ್ಲಿ ನೀವು ಕಾಣುತ್ತಿದ್ದೀರಾ ಎಂದರೆ ಸರಿ. ಮತ್ತೊಂದು ಫೋಟೋದಲ್ಲಿ ನೀವು ಶರಟನ್ನು ದರಿಸಿರುತ್ತೀರಾ ಎಂದರೆ ಸರಿ. ಮುಮಾ.3 ನ್ನು ಪ್ರಕರಣಕ್ಕಾಗಿ ಸೃಷ್ಟಿಸಿ ನೀಡಿರುತ್ತೀರಾ ಎಂದರೆ ಸರಿಯಲ್ಲ. ನೀವು ಮತ್ತು

*ಪೊಲೀಸರು ಪರಸ್ಪರ ಷಾಮೀಲಾಗಿ ಮುಮಾ.1 ರಿಂದ 3 ನ್ನು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ಘಟನೆಗೂ ಆರೋಪಿಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.*

***ಮರು ವಿಚಾರಣೆ ಇಲ್ಲ.***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***